26. ದಾವಣಗೆರೆ	5	1	24
27. ಚಾಮರಾಜನಗರ	3	-	37
28. ಹಾವೇರಿ	1	1	26
29. ಗದಗ್	8	1	4
30. ಉಡುಪಿ	1	1	21
31. ಕೊಪ್ಪಳ್	3	1	13
ಒಟ್ಟು	307	24	1665

ವಿಷಯ: ಅನಧಿಕೃತ ಪಂಪ್‌ಸೆಟ್‌ಗಳ ಸಕ್ರಮೀಕರಣ.

920 (1242)

ಶ್ರೀ ಶಿವರಾಮು. ಬಿ (ಗಂಡಸಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಅಕ್ರಮ ಪಂಪು ಸೆಟ್‌ಗಳನ್ನು ಗುರುತಿಸಲಾಗಿದೆ.

ಆ) ಅಕ್ರಮ ಪಂಪು ಸೆಟ್‌ಗಳ ಸಕ್ರಮೀಕರಣಕ್ಕೆ ನಿಗದಿಗೊಳಿಸಿರುವ ದಿನಾಂಕ ಯಾವುದು?

ಇ) ಸಕ್ರಮಗೊಳಿಸಲಾಗಿರುವ ಪಂಪುಸೆಟ್‌ಗಳ ಸಂಖ್ಯೆ ಎಷ್ಟು? ಉಳಿದಿರುವ ಸಂಖ್ಯೆ ಎಷ್ಟು?

ಈ) ಸಕ್ರಮೀಕರಣಕ್ಕೆ ತೆಗೆದುಕೊಳ್ಳುವ ಹಣವೆಷ್ಟು?

ಉ) ಸಕ್ರಮೀಕರಣಗೊಳಿಸುವುದಕ್ಕೆ ಕೆ.ಇ.ಬಿಗೆ ಏನಾದರೂ ತೊಂದರೆ ಇದೆಯೇ?

ಶ್ರೀ ಶರಣ ಬಸಪ್ಪ ದರ್ಶಾನಾಪುರ (ಇಂಧನ ರಾಜ್ಯ ಸಚಿವರು):

ಅ) ದಿನಾಂಕ: 28-2-98ರ ಅಂತ್ಯದಲ್ಲಿರುವಂತೆ ರಾಜ್ಯದಲ್ಲಿ 50697 ಅನಧಿಕೃತ ನೀರಾವರಿ ಪಂಪು ಸೆಟ್‌ಗಳನ್ನು ಗುರುತಿಸಲಾಗಿದೆ.

ಆ) ಅಕ್ರಮ ನೀರಾವರಿ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲು ಕೊನೆಯ

ದಿನಾಂಕವನ್ನು ನಿಗದಿಪಡಿಸಿರುವುದಿಲ್ಲ.

ಇ) ದಿನಾಂಕ: 28-2-98ರ ಅಂತ್ಯದಲ್ಲಿರುವಂತೆ ರಾಜ್ಯದಲ್ಲಿ 23484 ಪಂಪು ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ. ಗುರುತಿಸಲಾಗಿರುವ 27213 ಅಕ್ರಮ ಪಂಪು ಸೆಟ್‌ಗಳನ್ನು ಸಕ್ರಮಗೊಳಿಸಬೇಕಾಗಿರುತ್ತದೆ.

ಈ) ವಿವರಗಳು ಕೆಳಕಂಡಂತಿದೆ.

1. ಸಾಮಾನ್ಯ ವರ್ಗದಡಿಯಲ್ಲಿ ಬರುವ ಅನಧಿಕೃತ ನೀರಾವರಿ ಪಂಪು ಸೆಟ್ಟುಗಳನ್ನು ಸಕ್ರಮಗೊಳಿಸಲು ರೂ. 10,000-00 ಅಥವಾ ಎಲ್.ಟಿ ಮಾರ್ಗ ವಿಸ್ತರಣೆಯ ವೆಚ್ಚ ಇವೆರಡರಲ್ಲಿ ಯಾವುದು ಹೆಚ್ಚೂ ಅದು, ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳವರ ಅನಧಿಕೃತ ನೀರಾವರಿ ಪಂಪು ಸೆಟ್‌ಗಳನ್ನು ಸಕ್ರಮಗೊಳಿಸಲು ರೂ. 5000-00 ಅಥವಾ ಎಲ್.ಟಿ.ಮಾರ್ಗ ವಿಸ್ತರಣೆಯ ವೆಚ್ಚ ಇವೆರಡರಲ್ಲಿ ಯಾವುದೂ ಹೆಚ್ಚೋ ಅದು

2. ಮೀಟರ್ ಸೆಕ್ಯೂರಿಟಿ ಡಿಪಾಜಿಟ್ ರೂ: 960.00

3. ಪ್ರತಿ ಅಶ್ವಶಕ್ತಿಗೆ ರೂ: 450.00 ರಂತೆ ವಿದ್ಯುತ್ ಶುಲ್ಕ

4. ಪ್ರತಿ ಅಶ್ವ ಶಕ್ತಿಗೆ ರೂ: 300.00 ರಂತೆ ಭದ್ರತಾ ಠೇವಣಿ

ಅಲ್ಲದೇ ಅರ್ಜಿದಾರರು ಮೀಟರ್ ಅಳವಡಿಸಲು ಮೆಟಲ್ ಮೀಟರ್ ಬಾಕ್ಸನ್ನು ಒದಗಿಸಬೇಕು.

ಉ) ಅನಧಿಕೃತ ನೀರಾವರಿ ಪಂಪು ಸೆಟ್‌ಗಳನ್ನು ಸಕ್ರಮಗೊಳಿಸುವುದರಿಂದ ಹಾಲಿಯಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಓವರ್ ಲೋಡ್ ಆಗಿ ವಿತರಣಾ ವ್ಯವಸ್ಥೆ ಹದಗೆಡುವ ಸಂಭವವಿರುತ್ತದೆ. ಅಧಿಕೃತ ನೀರಾವರಿ ಪಂಪು ಸೆಟ್ ಅರ್ಜಿದಾರರಿಂದ ಸಕ್ರಮೀಕರಣಕ್ಕಾಗಿ ವಸೂಲಿ ಮಾಡುವ ಹಣವನ್ನು ಹೊಸರ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಮತ್ತು ವ್ಯವಸ್ಥೆಯನ್ನು ಸುಧಾರಿಸಲು ವಿನಯೋಗಿಸಲಾಗುವುದು. ಈ ಕಾಮಾಗಾರಿಗಳನ್ನು ಕೈಗೊಳ್ಳಲು ಮಂಡಳಿಗೆ ಕಾಲವಾಕಾಶ ಅಗತ್ಯವಿರುತ್ತದೆ.

ವಿಷಯ: ಬೆಂಗಳೂರು ನಗರದಲ್ಲಿ ಕೊಳಚೆ ನೀರು ಶುದ್ಧೀಕರಿಸುವುದು

922 (1218)

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಬೆಂಗಳೂರು